**ಸಾಕ್ಷಿಯನ್ನು ದಿಃ25.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ದಿಃ 21.09.2012 ರ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

2. 2 ರಿಂದ 4 ನೇ ಐಟಂ ಸ್ವತ್ತುಗಳ ಸಂಬಂಧ ಎಂ.ಆರ್ ಪ್ರತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ.

3. 2 ರಿಂದ 4 ನೇ ಐಟಂ ಸ್ವತ್ತುಗಳ ಬಗ್ಗೆ ವ್ಯವಸಾಥ್ಥಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ, ನನಗೆ ಗೊತ್ತಿಲ್ಲ.

4. ಎಲ್ಲಾ ವಾದಿಗಳ ಪರವಾಗಿ ನೀವು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ, ಹೌದು.

5. ಹೆಚ್.ಎಸ್.ಅಣ್ಣಯ್ಯ ಎಂದರೆ ನನ್ನ ಅಣ್ಣ. ಅವರ ಪತ್ನಿ ಲಲಿತಮ್ಮ ನವರಿಗೆ ದಾವಾ ಐಟಂ ನಂ.1 ರ ಸ್ವತ್ತು ಹೇಗೆ ಬಂದಿತು ಎಂದರೆ, ನನ್ನ ತಂದೆಯಿಂದ ಬಂದ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಪತ್ರ ಹಾಜರುಪಡಿಸಿದ್ದೇನೆ.

6. ಐಟಂ 2 ರ ಸ್ವತ್ತು ನನ್ನ ಹೆಸರಿಗೆ ಬಂದಿರುತ್ತದೆ. ಐಟಂ ನಂ.3 ರ ಸ್ವತ್ತು ಕೃಷ್ಣಪ್ಪನಿಗೆ ಹೋಗಿದೆ.

7. ದಿಃ 10.03.1995 ರ ವಿಭಾಗ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ.

8. ವಿಭಾಗ ಪತ್ರದಂತೆ ಹೆಚ್.ಎ.ಹೊಂಬೆಗೌಡರಿಗೆ ಒಟ್ಟು 9 ಎಕರೆ ಹೋಗಿದೆ. ಸ.ನಂ.139 ರಲ್ಲಿ 2 ಎಕರೆ 3 ಗುಂಟೆ, ಸ.ನಂ.153 ರಲ್ಲಿ 3 ಎಕರೆ 18 ಗುಂಟೆ, ಸ.ನಂ.155 ರಲ್ಲಿ ಹೋಗಿದೆ, ಬೇರೆ ಸರ್ವೇ ನಂಬರ್ ಗೊತ್ತಿಲ್ಲ. ಅವರಿಗೆ ಮನೆಗಳು ಸಹ ಹೋಗಿವೆ.

9. ಯಾವ ದಿನಾಂಕದಂದು ನಮ್ಮ ಸ್ವತ್ತುಗಳಿಗೆ ತೊಂದರೆ ನೀಡಿದರು ಎಂದು ನನಗೆ ನೆನಪಿಲ್ಲ. ಈಗ 2-3 ವರ್ಷದಲ್ಲಿ ತೊಂದರೆ ನೀಡಿರುತ್ತಾರೆ. ಜಗಳವಾಗುವಾಗ ಬೇರೆ ಯಾರೂ ಇರಲಿಲ್ಲ. ಆ ಸಂಬಂಧ ಪೊಲೀಸರಿಗೆ ದೂರು ನೀಡಿರುತ್ತೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ, ಕೊಟ್ಟಿರಬಹುದು.

10. ಪಂಚಾಯತಿ ಮಾಡಿದ ದಿನಾಂಕ ನನಗೆ ನೆನಪಿಲ್ಲ. 2023 ರಲ್ಲಿ ಜಗಳವಾದ 15 ದಿನಗಳಲ್ಲಿ ಪಂಚಾಯತಿ ಸೇರಿಸಿರುತ್ತೇವೆ.

11. ಹೆಚ್.ಎ.ಹೊಂಬೆಗೌಡ ಹಾಗೂ ಚಂದ್ರಹಾಸನ ತಂದೆ ನಿಮಗೆ ಏನಾಗಬೇಕು ಎಂದರೆ, ಸಂಬಂಧ ನನಗೆ ಗೊತ್ತಿಲ್ಲ.

12. ಹೆಚ್.ಎ.ಹೊಂಬೆಗೌಡರು ಮೃತರಾಗಿ ಎಷ್ಟು ವರ್ಷವಾಯಿತು ಎಂದರೆ ಅಂದಾಜು 30-35 ವರ್ಷ ಆಗಿರಬಹುದು.

13. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಆ ಕಾರಣಕ್ಕೆ ನಿಮ್ಮ ತಾತನ ವಾರಸುದಾರರು ವಿಭಾಗ ಮಾಡಿಕೊಂಡ ಬಗ್ಗೆ ವಿಭಾಗ ಪತ್ರ ಇದೆಯಾ ಎಂದರೆ, ಇದೆ. ಅದನ್ನು ಹಾಜರುಪಡಿಸಿರುತ್ತೇನೆ.

14. ದಾವಾ ಸ್ವತ್ತುಗಳು ಈಗ ಸುಮಾರು 7-8 ವರ್ಷದಿಂದ ಪಾಳು ಬಿದ್ದಿವೆ ಎಂದರೆ ಸರಿ.

15. ಹೆಚ್.ಎ.ಹೊಂಬೆಗೌಡರ ಖಾತೆ ಇರುವ ಸ್ವತ್ತುಗಳು ಸಹ ಪಾಳು ಬಿದ್ದಿವೆ ಎಂದರೆ ಸರಿ.

16. ನಿಮ್ಮ ಪಿತ್ರಾರ್ಜಿತ ಆಸ್ತಿಗಳು ಕಾನೂನುಬದ್ಧವಾಗಿ ವಿಭಾಗ ಆಗಿಲ್ಲದೇ ಇರುವುದರಿಂದ ನಿಮ್ಮ ನಿಮ್ಮಲ್ಲಿ ಆಗಾಗ ಗಲಾಟೆಗಳುಂಟಾಗಿ ಪೊಲೀಸ್ ದೂರು ದಾಖಲಾಗಿದೆ ಎಂದರೆ ಸರಿ.

17. ನಿಮ್ಮ ವಿರುದ್ಧ ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ 4 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದರೆ ಸರಿ.

18. ಪಿತ್ರಾರ್ಜಿತ ಆಸ್ತಿಗಳು ಕಾನೂನುಬದ್ಧವಾಗಿ ವಿಭಾಗ ಆಗಿಲ್ಲದ ಕಾರಣ ಪ್ರತಿವಾದಿಗಳು ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ವಿಭಾಗ ಕೋರಿ ದಾವೆ ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

19. ನಿಮ್ಮ ಪತ್ನಿ ಹಾಗೂ ಮಗನ ವಿರುದ್ಧ ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಲಯದಲ್ಲಿ ಸ.ನಂ.153/6 ರಲ್ಲಿ 1 ಎಕರೆ 34 ಗುಂಟೆ ಸಂಬಂಧ ಸರಿ. ಸದರಿ ಸರ್ವೇ ನಂಬರ್ ನಲ್ಲಿ ನಿಮಗೆ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ, ನಾವೇ ಅನುಭೋಗದಲ್ಲಿದ್ದೇವೆ ಎಂದು ನುಡಿಯುತ್ತಾರೆ.

20. ಸದರಿ ದಾವೆಯಲ್ಲಿ ನಿಮ್ಮ ವಿರುದ್ಧ ನಿರ್ಬಂಧಕಾಜ್ಞೆ ಆದೇಶ ಇದ್ದು, ನೀವು ಉಲ್ಲಂಘನೆ ಮಾಡಿದ್ದರಿಂದ ನಿಮ್ಮ ವಿರುದ್ಧ ಮಿಸ್ ಕೇಸ್ ದಾಖಲಾಗಿದೆ ಎಂದರೆ, ಆಗಿಲ್ಲ, ನಾವು ಅಪೀಲು ಹೋಗಿದ್ದೇವೆ ಎಂದು ನುಡಿಯುತ್ತಾರೆ.

21. ದಾವಾ ಐಟಂ ನಂ.1 ರಿಂದ 5 ನೇ ಸ್ವತ್ತುಗಳ ಹಾಗೂ ಇತರೇ ಜಮೀನುಗಳ ಸಂಬಂಧ ಪ್ರತಿವಾದಿಗಳು ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ದಾವೆ ಹಾಕಿದ್ದಾರೆ ಎಂದರೆ ಸರಿ.

22. ನೀವು ದಾವಾ ಸ್ವತ್ತುಗಳ ಮೂಲ ದಾಖಲಾತಿಗಳನ್ನು ಹಾಜರುಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

23. ಯಾವುದೇ ದಾಖಲಾತಿ ಹಾಜರುಪಡಿಸದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

24. ನೀವು, ನಿಮ್ಮ ಮಗ ಸುನೀಲ, ನಿಮ್ಮ ಪತ್ನಿ ತಿಮ್ಮಾಜಮ್ಮ ಹಾಗೂ ಅಣ್ಣಯ್ಯ, ಕೃಷ್ಣೇಗೌಡ, ಲಲಿತಮ್ಮ ಹಾಗೂ ಲಲಿತಮ್ಮ ಕೋಂ ಅಣ್ಣಯ್ಯ ರವರು ಸೇರಿಕೊಂಡು 2 ನೇ ಪ್ರತಿವಾದಿಗೆ ಕಿರುಕುಳ ನೀಡಿಕೊಂಡು ಬರುತ್ತಿದ್ದೀರಾ ಎಂದರೆ ಸರಿಯಲ್ಲ.

25. ವಾದಿಗಳ ಮೇಲೆ ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ನೀವು ಖುದ್ದು ಹಾಜರಾಗುತ್ತಿದ್ದೀರಾ ಎಂದರೆ ಸರಿ.

26. ದಾವಾ ಸ್ವತ್ತುಗಳ ಮೇಲೆ ನೀವಾಗಲೀ ಅಥವಾ ಇತರೇ ವಾದಿಗಳಾಗಲೀ ಯಾವತ್ತೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ